11 ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ಚಿಂತಾಮಣಿ ತಾಲ್ಲೂಕು ಪೇರುಮಾಚನಹಳ್ಳಿಯಲ್ಲಿ ಶಾಲಾಕೊಠಡಿಗಳನ್ನು ಕಟ್ಟುವಂತಹ ವಿಚಾದಲ್ಲಿ ಆಗಿರುವಂತಹ ಘಟನೆ

+ ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ನಾವು ಕಳುಹಿಸಿದ ನಿಲುವಳಿ ಸೂಚನೆ ಏನೆಂದರೆ ಸರ್ಕಾರದ ಆಡಳಿತದಲ್ಲಿ ಏಕಪಕ್ಷೀಯವಾಗಿ ಯಾವರೀತಿ ವಿರೋಧ ಪಕ್ಷದ ಕಾರ್ಯಕರ್ತರನ್ನು ತುಳಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದರೆ ಇದೇರೀತಿ ಮುಂದುವರಿದರೆ ಆಡಳಿತದ ಮೇಲೆ ಆಗತಕ್ಕಂಥ ಪರಿಣಾಮಗಳು ಏನು? ಇದನ್ನು ತತ್‌ಕ್ಷಣ ಸರ್ಕಾರ ಸರಿಪಡಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಅದರಲ್ಲೂ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹಸಚಿವರ ಗಮನ ಸೆಳೆಯಬೇಕೆಂದು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಅದೇನೆಂದರೆ ಚಿಂತಾಮಣಿ ತಾಲ್ಲೂಕು ಪೆರುಮಾಚನಹಳ್ಳಿಯಲ್ಲಿ ಶಾಲೆಗೆ ಎರಡು ಕೊಠಡಿಗಳನ್ನು ಕಟ್ಟುವಂತಹ ವಿಚಾರ. ಚಿಂತಾಮಣಿ ರಸ್ತೆ ಪಕ್ಕದಲ್ಲಿ ಶಾಲಾ ಕೊಠಡಿಗಳನ್ನು ಕಟ್ಟಬೇಕಾಗಿದ್ದು, ಅಲ್ಲಿ ಇರುವಂತಹ ಶಾಲೆ ಬಹಳ ಹಳೆಯದಾಗಿದೆ. ಬಿದ್ದುಹೋಗಿದೆ, ಆದುದರಿಂದ ಹೊಸದಾಗಿ ಕಟ್ಟಬೇಕೆಂದು ತಾಲ್ಲೂಕು ಪಂಚಾಯಿತಿಯವರು ರಸ್ತೆ ಪಕ್ಕದಲ್ಲಿ ಮಾಡಬೇಕೆಂದು ಹೇಳಿದಾಗ ಅಲಿಗ್ಲೆ ಒಬ್ಬರು ಇಂಜಿನಿಯರ್ ಕಟ್ಟುವುದಕ್ಕೆ ಹೋಗುತ್ತಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ನನ್ನ ಹತ್ತಿರ ದಾಖಲೆಗಳು ಇವೆ. ಆ ದಾಖಲೆಗಳನ್ನು ಸಹ ಮಾನ್ಯ ಗೃಹ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಸರ್ವೆ ನಂ.117 ಜಾಗದ ಮಾಲೀಕ ಬಹಳ ವರ್ಷದಿಂದ ಅಲ್ಲಿ ಇದ್ದು, ಜಾಗ ನನಗೆ ಸೇರಿರುತ್ತದೆ, ಇದನ್ನು ನಾನು ಕೊಡುವುದಕ್ಕಾಗಲಿಲ್ಲವೆಂದು ಹೇಳಿ ದಾಖಲೆಗಳನ್ನು ಸಹ ತೋರಿಸುತ್ತಾನೆ. ಇದಾದಮೇಲೆ ಇದನ್ನು ಸರ್ವೆ ಮಾಡಿ ಎಂದು ಸರ್ಕಾರದವರು ಹೇಳುತ್ತಾರೆ. ಸರ್ವೆ ಮಾಡಿ ರಿಪೋರ್ಟ್ ಹೇಳಿರುವುದು, ಇದು ಮಾಲೀಕ ಸ್ವಂತ ಜಮೀನು ಅಲ್ಲಿ ಕಟ್ಟುವುದಕ್ಕೆ ಆಗುವುದಿಲ್ಲವೆಂದು ಸಹ ಸರ್ವೆ ಡಿಪಾರ್ಟ್‌ಮೆಂಟ್‌ನವರು ಹೇಳುತ್ತಾರೆ. ಆದಾದನಂತರ ಆ ತಾಲ್ಲೂಕಿನ ಎಕ್ಸಿಕ್ಯುಟಿವ್ ಆಫೀಸರ್ ಸರ್ವೆ ನಂ. 117 ಸರಿ ಇದೆ, ಅಲ್ಲಿ ಶಾಲಾ ಕೊಠಡಿಗಳನ್ನು ಕಟ್ಟಬಹುದು ಎನ್ನುವುದನ್ನು ಹೇಳುತ್ತಾರೆ. ಆದಾದನಂತರ ಗ್ರಾಮಪಂಚಾಯಿತಿಯವರು ತೀರ್ಮಾನ ಮಾಡಿ ಅಲ್ಲಿ ಕಟ್ಟುವುದು ಸರಿಯಿಲ್ಲವೆಂದು ಬಿಡುತ್ತಾರೆ. ಆದರೆ ಆ ಎಕ್ಸಿಕ್ಯುಟೀವ್ ಆಫೀಸರ್ ಅದು ಸರ್ವೆ ನಂ 117 ಸರ್ಕಾರದ ಜಮೀನು ಅಲ್ಲಿ ಕಟ್ಟಬೇಕೆಂದು ಮತ್ತೆ ಪತ್ರ ಬರೆಯುತ್ತಾರೆ. ಇದೆಲ್ಲಾ ಆದನಂತರ ಮತ್ತೆ ಅಲ್ಲಿಯ ಗ್ರಾಮಪಂಚಾಯಿತಿಯವರು ಈ ಎಕ್ಕಿಕ್ಯುಟೀವ್ ಆಫೀಸರ್ ಏನು ತೀರ್ಮಾನ ಮಾಡುತ್ತಾರೆ ಅದು ಸರಿ, ಅಲ್ಲೇ ಕಟ್ಟಬೇಕೆಂದು ನಿರ್ಧರಿಸುತ್ತಾರೆ. ಆದಾದನಂತರ ನನಗೆ ಈ ರೀತಿ ಯಾವ ಕಾರಣದಿಂದ ಆಗುತ್ತಿದೆ ಎಂದು ಗೋತ್ತಿಲ್ಲ. ಕೋಲಾರ ಜಿಲ್ಲಾಪರಿಷತ್ತಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಅವರು ಏನು ಪತ್ರ ಬರೆಯುತ್ತಾರೆ ಎಂದರೆ ಅದು ಪ್ರೈವೇಟ್ ಲ್ಯಾಂಡ್, ಆದುದರಿಂದ ತಾವು ಹೇಳಿರುವ ಜಾಗದಲ್ಲಿ ಕಟ್ಟುವುದಕ್ಕೆ ಆಗುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಎಕ್ಸಿಕ್ಯುಟೀವ್ ಆಫೀಸರ್ ಒಂದು ಟಿಪ್ಪಣಿ ಹಾಕಿ, ಚಿಂತಾಮಣಿ ತಾಲ್ಲೂಕಿನ ಪೆರುಮಾಚನಹಳ್ಳಿಯ ಶಾಲಾ ಆವರಣದಲ್ಲಿ ಎರಡು ಕೊಠಡಿಗಳನ್ನು ಕಟ್ಟಲು ಏನು ಈ ಹಿಂದೆ ಸ್ಪಷ್ಟ ನಿರ್ದೇಶನ ಕೊಡಲಾಗಿತ್ತು, ಅದರಂತೆ ಅದೇ ಆವರಣದಲ್ಲಿ ಎರಡು ಕೊಠಡಿಗಳನ್ನು ಕಟ್ಟಬೇಕು. ಆ ಶಾಲಾ ಆವರಣವನ್ನು ಹೊರತು ಪಡಿಸಿ

ಬೇರೆ ಎಲ್ಲೂ ಕೂಡ ಕಟ್ಟುವುದು ಸೂಕ್ತವಲ್ಲ. ಆರೀತಿ ಬೇರೆ ಕಡೆ ಕಟ್ಟಿದ್ದೆ ಆದರೆ ನಿಮ್ಮ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು. ಇದೆಲ್ಲಾ ಆದನಂತರ ಒಬ್ಬರು ಜೂನಿಯರ್ ಇಂಜಿನಿಯರನ್ನು ಶಂಕರಬಾರಿ ಎನ್ನುವವರನ್ನು ಅಲ್ಲಿಗೆ ಈ ಕೆಲಸಕ್ಕೆ ಎಂದು ಕರೆದುಕೊಂಡು ಬರುತ್ತಾರೆ. ಆ ಜೆ.ಇ. ಹಾಗೂ ಸಿ.ಇ.ಓ ಆ ಜಾಗದಲ್ಲಿ ಕಟ್ಟಬೇಕೆಂದು ಅಲ್ಲಿಯ ಜಮೀನಿನ ಹತ್ತಿರ ಹೋದಾಗ ಆ ಜಮೀನಿನ ಮಾಲೀಕನಾದ ಕೃಷ್ಣಪ್ಪ ಪ್ರತಿಭಟನೆ ಮಾಡುತ್ತಾನೆ. ಹೊಡೆದಾಟವಾಗುತ್ತದೆ. ಪೋಲೀಸ್ ಪ್ರೊಟೆಕ್ಷನ್ ಆ ಸಮಯದಲ್ಲಿ ಅಧಿಕಾರಿಗಳು ತೆಗೆದು ಕೊಂಡರು. ಆ ಹೊಡೆದಾಟದಲ್ಲಿ ಮಾಲೀಕ ಕೃಷ್ಣಪ್ಪನಿಗೆ ಏಟು ಬಿದ್ದು, ಅವರನ್ನು ನಿಮ್ಹಾನ್ಸ್‌ಗೆ ಸೇರಿಸಿದರು. ಸೇರಿಸಿದ ಎರಡು ದಿವಸದ ನಂತರ ಅವನು ಸತ್ತುಹೋದ. ಪೊಲೀಸರಿಗೆ, ಯಾರು ಇವರನ್ನು ಹೊಡೆದರು ಅವರ ಮೇಲೆ ಇದುವರೆಗೂ ಕೇಸ್ ಬುಕ್ ಮಾಡಿ ಎಂದರೆ ಮಾಡಿಲ್ಲ. ಯಾರು ಜಮೀನಿನ ಮಾಲೀಕ, ಅದು ನನ್ನ ಜಮೀನು ಎಂದು ಹೇಳಿದ, ಯಾರು ತಲೆಯನ್ನು ಹೊಡೆಸಿಕೊಂಡು ಅವನು ನಿಮ್ಹಾನ್ಸ್‌ನಲ್ಲಿ ಸತ್ತ. ಯಾವ ವ್ಯಕ್ತಿ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಸತ್ತ ಅವನ ಪರವಾಗಿ ಇರತಕ್ಕಂಥ ಯಾವುದೇ ಕ್ರಮವನ್ನು ಅಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜಕೀಯ ದುರುದ್ದೇಶದಿಂದ ಇದುವರೆಗೆ ಸಹಿತ ತೆಗೆದುಕೊಂಡಿಲ್ಲ. ಈ ಸತ್ತ ವ್ಯಕ್ತಿಗೆ ಯಾರು ಹೊಡೆದರು ಅವರನ್ನು ಬಂಧನ ಮಾಡಿ ಕೇಸ್ ಹಾಕಿ ಜೈಲಿಗೆ ಕಳುಹಿಸುವಂಥದ್ದಕ್ಕೆ ಇವತ್ತಿನವರೆಗೂ ಸಹಿತ ಚಾರ್ಜ್‌ಶೀಟ್ ಹಾಕಿಲ್ಲ. ಈ ಕಾರ್ಯನಿರ್ವಹಣಾಧಿಕಾರಿ, ಚೀಫ್ ಇಂಜಿನಿಯರ್ ಇವರೆಲ್ಲ ಇದ್ದೂ ಈ ಪ್ರಯತ್ನ ನಡೆಯುತ್ತಿದ್ದರೆ ಇದಕ್ಕೆ ಏನಾದರೂ ಅರ್ಥವಿದೆಯೇ? ಅದಕ್ಕೋಸ್ಕರ ನಾವು ಹೇಳುವುದೇನೆಂದರೆ ಅಲ್ಲಿ ಏಕಪಕ್ಷೀಯ ಆಡಳಿತ ನಡೆಯುತ್ತಿದೆ, ಇದು ನಿಮಗೆ ಒಳ್ಳೆಯದಾಗುವುದಿಲ್ಲ ಎಂದು ಬಜೆಟ್ ಭಾಷಣದಲ್ಲಿ, ರಾಜ್ಯಪಾಲರ ಭಾಷಣದಲ್ಲಿ ನಾವು ಹೇಳಿರುವಂಥದ್ದು. ಕಂಬಾಲಪಲ್ಲಿಯಲ್ಲಿ ಆಗಿರತಕ್ಕಂಥ ಘಟನೆಯ ಹಿಂದೆ ಇರತಕ್ಕಂಥದ್ದು ಏನು ಎನ್ನುವುದು ಮಾನ್ಯ ಗೃಹಸಚಿವರಿಗೆ ಗೊತ್ತಿದೆ. ಈ ರೀತಿಯಾದ ಘಟನೆಗಳು ಹಳ್ಳಿಹಳ್ಳಿಯಲ್ಲೂ ನಡೆಯುತ್ತಿದೆ. ಜಾತಿ ವೈಷಮ್ಯ, ಸವರ್ಣೀಯರು ಮತ್ತು ಹರಿಜನರಿಗೂ ಇರತಕ್ಕಂಥ ಭಿನ್ನಾಭಿಪ್ರಾಯ ಇದ್ದಂಥದ್ದು ಆಗಿದ್ದರೆ ಅದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಅಂಥದ್ದು ಏನೂ ಇಲ್ಲದೆ ಈ ಎಕ್ಸಿಕ್ಯೂಟೀವ್ ಆಫೀಸರ್‌ಗೆ ಅಲ್ಲಿರತಕ್ಕಂಥ ಎಂ.ಎಲ್.ಎ. ಬಿಟ್ಟು ಇದರ ಹಿಂದೆ ಯಾರು ಇದ್ದಾರೆ? ಇಲ್ಲಿ ರಾಜಕೀಯ ಒತ್ತಡ ಇರಲೇಬೇಕು, ಜಿಲ್ಲಾಮಂತ್ರಿಗಳ ಒತ್ತಡ ಇದೆಯೇ? ಅಥವಾ ಇದರ ಹಿಂದೆ ಬೇರೆ ಯಾರಾದರೂ ರಾಜಕೀಯ ಮುಖಂಡರು ಇದ್ದಾರೆಯೇ ಎಂಬುದರ ಬಗ್ಗೆ ಸರ್ಕಾರ ಸದನಕ್ಕೆ ತಿಳಿಸಬೇಕಾಗುತ್ತದೆ. ಈ ಅಧಿಕಾರಿಗಳು ಸ್ವಇಚ್ಛೆಯಿಂದ ಹೇಗೆ ಬೇಕಾದರೂ ಆಡಳಿತ ನಡೆಸಿಕೊಂಡು ಹೋಗಬಹುದು, ಏನು ಬೇಕಾದರೂ ಮಾಡಬಹುದೆಂದು ಸರ್ಕಾರ ತಿಳಿದುಕೊಂಡಿದ್ದರೆ. ನಾವು ಆಡಳಿತ ಪಕ್ಷದಲ್ಲಿ ಇದ್ದುಕೊಂಡು ಮೂರು ಸಲ ನೋಡಿದ್ದೇವೆ. ಏನಾಗುತ್ತದೆಂದರೆ, ಒಂದೆರಡು ವರ್ಷ ಹನಿಮೂನ್ ಪಿರಿಯಡ್ ತರಹ ಚೆನ್ನಾಗಿರುತ್ತದೆ. ಆ ಮೇಲೆ ನಿಮ್ಮನಿಮ್ಮಲ್ಲಿ, ನಮ್ಮನಮ್ಮಲ್ಲಿ ವ್ಯತ್ಯಾಸಗಳು ಬರುತ್ತವೆ. ಈ ರೀತಿ ಬ್ಯೂರೊಕ್ರಸಿಗೆ ಮೂಗುದಾರ ಹಾಕದೆ ಮುಂದುವರೆಸಿಕೊಂಡು ಹೋದರೆ ಸರ್ಕಾರದಲ್ಲಿ ಭಿನ್ನಾಭಿಪ್ರಾಯಗಳು ಬಂದಂತಹ ಕಾಲದಲ್ಲಿ ಸರ್ಕಾರದ ಮಾತುಗಳನ್ನು ಅಧಿಕಾರಿಗಳು ಎಲ್ಲಿ ಕೇಳುತ್ತಾರೆ? ಚಾಮರಾಜನಗರ ಜಿಲ್ಲೆಯ ಬಂಡಳ್ಳಿಯಲ್ಲಿದ್ದಂಥ ಸರ್ಕಲ್ ಇನ್ಸ್‌ಪೆಕ್ಟರನ್ನು ಅಮಾನತ್ತಿನಲ್ಲಿಟ್ಟು ಅಲ್ಲಿ ನ್ಯಾಯಾಂಗ ತನಿಖೆಯನ್ನು ಮಾಡುತ್ತೇವೆಂದು

ಸರ್ಕಾರದಿಂದ ಅನೌನ್ಸ್‌ಮೆಂಟ್ ಮಾಡಿದ್ದಾರೆ. ಈ ರೀತಿಯ ಸರ್ಕಾರದ ಸ್ಪಿರಿಟ್‌ನ್ನು ನಾವು ಮೆಚ್ಚುತ್ತೇವೆ. ಅದೇ ತರಹದ ಸ್ಪಿರಿಟ್‌ನಲ್ಲಿ ಇದಕ್ಕೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು ಇದನ್ನು ವಿಚಾರಣೆ ಮಾಡಲಿಕ್ಕೆ ನ್ಯಾಯಾಂಗ ತನಿಖೆಯನ್ನು ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎ. ನಾಗರಾಜ್(ಮಾಲೂರು): ಮಾನ್ಯ ಅಧ್ಯಕ್ಷರೆ, ಪೆರುಮಾಚನಹಳ್ಳಿಯಲ್ಲಿ ಗಲಾಟೆಯಾಗಿ ಕೃಷ್ಣಪ್ಪ ಎನ್ನುವ ವ್ಯಕ್ತಿ ಸತ್ತಿದ್ದಾನೆ ಆದರೆ ಅಲ್ಲಿಯ ವಾಸ್ತವಾಂಶ ಏನೆಂದರೆ ಸ್ಕೂಲ್ ಬೌಂಡರಿಯಲ್ಲಿ ಸರ್ಕಾರದವರು ಸ್ಕೂಲ್ ಕಟ್ಟಡ ಕಟ್ಟುವುದಕ್ಕೆ ಹೋದಾಗ ಸದರಿ ಕೃಷ್ಣಪ್ಪ ಬೋಗಸ್ ರೆಕಾರ್ಡ್‌ನ್ನು ಪ್ರೊಡ್ಯೂಸ್ ಮಾಡಿ ಓನರ್‌ಶಿಪ್‌ಗೆ ಕ್ಲೈಮ್ ಮಾಡುತ್ತಾನೆ. ಆಗ ಗಲಾಟೆಗಳು ಆಗಿ ಕೃಷ್ಣಪ್ಪ ಸಾಯುತ್ತಾನೆ. ಈಗಾಗಲೇ ಪೊಲೀಸರು ಐ.ಪಿ.ಸಿ. ಸೆಕ್ಷನ್ 302ರ ಅಡಿಯಲ್ಲಿ ಕೇಸ್ ತೆಗೆದುಕೊಂಡಿದ್ದಾರೆ. ಆದ್ದರಿಂದ ಇದಕ್ಕೆ ನ್ಯಾಯಾಂಗ ತನಿಖೆ ಬೇಕಾಗಿಲ್ಲವೆಂದು ನಾನು ಹೇಳುವುದಕ್ಕೆ ಇಚ್ಛಿಸಿಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಶ್ರೀ ನಾಗರಾಜು ಅವರು ಮಂತ್ರಿಯಾದರೆ ನನಗೆ ಬಹಳ ಸಂತೋಷ. ಅವರು ಮಂತ್ರಿಯಾಗಬೇಕೆಂದು ನಾನು ಬಹಳ ದಿವಸದಿಂದ ಆಸೆ ಪಡುತ್ತಿದ್ದೇನೆ. ಬೋಗಸ್ ರೆಕಾರ್ಡ್ ಎಂದು ಹೇಳಿದರು. ಆದರೆ ಇಲ್ಲಿರತಕ್ಕಂಥ ರೆಕಾರ್ಡ್ಸ್ ನೋಡಬೇಕು. ಅವನು ಗಲಾಟೆಯಲ್ಲಿ ಸತ್ತಿದ್ದಲ್ಲ, ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಸತ್ತಿರುವಂಥದ್ದು.

ಶ್ರೀ ಎ. ನಾಗರಾಜ್: ಮಾನ್ಯ ಅಧ್ಯಕ್ಷರೆ, ಗಲಾಟೆಯಲ್ಲಿ ಏಟು ಆದಾಗ ನಿಮ್ಹಾನ್ಸ್ ಆಸ್ಪತ್ರೆಗೆ ಹೋಗಿ ಸತ್ತಿರುವುದು. ವಾಸ್ತವಾಂಶ ಇದಾಗಿದ್ದು ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಬೋಗಸ್ ಆಗಿ ಓನರ್‌ಶಿಪ್‌ಗೆ ಕ್ಲೈಮ್ ಮಾಡಿ ಕಟ್ಟಡ ಕಟ್ಟುವುದಕ್ಕೆ ಹೋದಾಗ ಅಲ್ಲಿ ಎರಡು ಕಡೆಯವರಿಗೂ ಗಲಾಟೆಯಾಗಿ ಇದು ಆಗಿರುವಂಥದ್ದು. ಮತ್ತು ಸ್ಕೂಲ್ ಬೌಂಡರಿಯಲ್ಲಿ ಕಟ್ಟಡ ಕಟ್ಟಬೇಕೆಂದು ಅಧಿಕಾರಿಗಳು ಹೇಳಿದರೂ ಸಹ ಇವರು ಒಂದೂವರೆ ಕಿಲೋಮೀಟರ್ ದೂರ ಇರುವ ಜಮೀನಿನಲ್ಲಿ ಕಟ್ಟಬೇಕೆಂದು ಒತ್ತಡ ತಂದು ಅಲ್ಲಿ ಗಲಾಟೆಗೆ ಕಾರಣವಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ವಸ್ತುಸ್ಥಿತಿ ಏನು ಎನ್ನುವುದರ ಬಗ್ಗೆ ನ್ಯಾಯಾಂಗ ತನಿಖೆಯಾಗಲಿ. ಆಗ ಎಲ್ಲವೂ ಗೊತ್ತಾಗುತ್ತದೆ.

ಶ್ರೀ ಎ. ನಾಗರಾಜ್: ವಸ್ತುಸ್ಥಿತಿ ಈ ರೀತಿ ಇರುವುದರಿಂದ ಇದಕ್ಕೆ ನ್ಯಾಯಾಂಗ ತನಿಖೆ ಏನೂ ಬೇಕಾಗಿಲ್ಲ. ಸರ್ಕಾರ ವಾಸ್ತವಾಂಶ ಏನಿದೆ ಎಂಬುದನ್ನು ತಿಳಿದುಕೊಂಡು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಮಾನ್ಯ ಸಿಂಧ್ಯಾರವರು ಕೇಳುತ್ತಿದ್ದಾರೆ. ಎನ್‌ಕ್ವೈರಿ ಮಾಡಿದರೆ ಸತ್ಯ ಏನು ಎನ್ನುವುದು ಗೊತ್ತಾಗುತ್ತದೆ. ಆದ್ದರಿಂದ ಎನ್‌ಕ್ವೈರಿ ಮಾಡಲಿ.

+ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು, ಶ್ರೀ ಸಿ. ಬೈರೇಗೌಡರು, ಮತ್ತು ಶ್ರೀ ಸೋಮಶೇಖರ್ ರವರು ನಿಲುವಳಿ ಸೂಚನೆಯನ್ನು ಈ ಸದನದ ಮುಂದೆ ತಂದಿದ್ದರು.

ಆದರೆ, ಅದು ಕಾರಣಾಂತರದಿಂದ ಮುಂದಕ್ಕೆ ಹೋಗಿ ಈ ದಿನ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಇದು ನಿಲುವಳಿ ಸೂಚನೆ ಆಗುತ್ತದೆಯೇ ಅಥವಾ ಇಲ್ಲವೇ ಎನ್ನುವುದು ಶ್ರೀಯುತರುಗಳಾದ ಸಂಧ್ಯಾ ಮತ್ತು ಬೈರೇಗೌಡ ಅವರುಗಳಿಗೆ ಗೊತ್ತಿದೆ. ಆದರೆ ಮಾನ್ಯರವಾಗಿ ಅಲ್ಲಿ ಏನಾಗಿದೆ, ಮತ್ತು ನಡೆದಂಥ ಘಟನಾವಳಿ ಬಗ್ಗೆ, ಆ ಘಟನೆಯಲ್ಲಿ ಹೊಲೆಯಾದಂಥ ಸಂದರ್ಭದಲ್ಲಿ ಇವತ್ತು ಏನೇನು ಕ್ರಮಗಳನ್ನು ಜರುಗಿಸಿದ್ದೀರಿ ಎಂಬ ವಿವರವಾದ ಮಾಹಿತಿಯನ್ನು ಕೇಳಿದ್ದಾರೆ. ಈಗ ನಮ್ಮಲ್ಲಿರುವಂಥ ಮಾಹಿತಿಯನ್ನು ಒದಗಿಸುತ್ತಿದ್ದೇನೆ.

"ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯ ಪೆರುಮಾಚನಹಳ್ಳಿ ಗ್ರಾಮದಲ್ಲಿ ಶಾಲೆಯ ಕಟ್ಟಡ ಕಟ್ಟುವ ಬಗ್ಗೆ ಎರಡು ಗುಂಪಿನ ಮಧ್ಯೆ ವಿವಾದ ಇರುತ್ತದೆ. ಒಂದು ಗುಂಪು ಶಾಲೆಯ ಕಟ್ಟಡದ ಹತ್ತಿರ ಒಂದು ಕೊಠಡಿಯನ್ನು ಕಟ್ಟಲು ಪ್ರಾರಂಭಿಸಿದಾಗ ಇನ್ನೊಂದು ಗುಂಪು ಸದರಿ ಜಾಗಕ್ಕೆ ಅದೇ ಗ್ರಾಮದ ಶ್ರೀನಿವಾಸಪ್ಪ ಎಂಬುವರಿಗೆ ಸೇರಿದೆ ಎಂಬ ಕಾರಣಕ್ಕಾಗಿ ಕಟ್ಟುವ ಕೆಲಸವನ್ನು ನಿಲ್ಲಿಸಿದರು. ಈ ವಿಷಯವನ್ನು ಚಿಂತಾಮಣಿ ತಹಶೀಲ್ದಾರ್ ಮತ್ತು ಚಿಂತಾಮಣಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕರುಗಳ ಗಮನಕ್ಕೆ ತರಲಾಯಿತು. ಈ ಸಂಬಂಧದಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕರು ವಿವಾದಿತ ಸ್ಥಳವು ಸರ್ಕಾರಕ್ಕೆ ಸೇರಿದೆಯೆಂದು ಅಭಿಪ್ರಾಯಪಟ್ಟು ಕಟ್ಟಡ ಕೆಲಸಕ್ಕೆ ರಕ್ಷಣೆ ಕೊಡುವುದಕ್ಕೆ ಸ್ಥಳೀಯ ಪೊಲೀಸರಿಗೆ ತಿಳಿಸಿರುತ್ತಾರೆ. ದಿನಾಂಕ 16-2-2001ರಂದು ಮೊದಲನೇ ಗುಂಪು ಕಟ್ಟಡದ ಕೆಲಸವನ್ನು ಪ್ರಾರಂಭಿಸಿದಾಗ ಎರಡನೇ ಗುಂಪು ಕೆಲಸವನ್ನು ತಡೆದಾಗ ಎರಡೂ ಗುಂಪುಗಳ ಮಧ್ಯೆ ನಡೆದ ಘರ್ಷಣೆಯ ಪರಿಣಾಮವಾಗಿ ಎರಡೂ ಗುಂಪಿನವರಿಗೆ ಗಾಯಗಳಾಗಿರುತ್ತವೆ. ಈ ಬಗ್ಗೆ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ 12:2001 ಅನ್ವಯ ದಾಖಲು ಮಾಡಲಾಗಿದೆ. ಮೊದಲನೆ ಗುಂಪಿನ ಆರ್. ನಾರಾಯಣಸ್ವಾಮಿ ಎಂಬುವವರ ದೂರಿನ ಮೇರೆಗೆ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ 13:2001ರಂದು ದಾಖಲು ಮಾಡಲಾಗಿದೆ. ಎರಡೂ ಪ್ರಕರಣಗಳು ತನಿಖೆಯಲ್ಲಿರುತ್ತವೆ. ದಿನಾಂಕ 17-2-2001ರಂದು ಚಿಂತಾಮಣಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ತೆಗೆದುಕೊಂಡ ಕ್ರಮದ ವಿರುದ್ಧ ಪ್ರತಿಭಟಿಸಲು ಎರಡನೇ ಗುಂಪಿನ ಸುಮಾರು 300 ಜನರು ಪ್ರವಾಸಿ ಮಂದಿರದಿಂದ ಚಿಂತಾಮಣಿ ತಾಲ್ಲೂಕು ಪಂಚಾಯತಿ ಕಛೇರಿಗೆ ಮೆರವಣಿಗೆಯಲ್ಲಿ ಬಂದು ತಾಲ್ಲೂಕು ಪಂಚಾಯತಿ ಕಛೇರಿ ಎದುರಿಗೆ ಧರಣಿ ಮಾಡಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯನ್ನು ಮತ್ತು ಹಿರಿಯ ಅಭಿಯಂತರರಾದ ಶ್ರೀ ಶಂಕರಾಚಾರಿ ಅವರನ್ನು ಅಮಾನತ್ತು ಪಡಿಸುವಂತೆ ಆಗ್ರಹಪಡಿಸಿರುತ್ತಾರೆ. ವಿಷಯ ತಿಳಿದ ಪೊಲೀಸ್ ಅಧೀಕ್ಷಕರು, ಕೋಲಾರ ಇವರು ಜಿಲ್ಲಾಧಿಕಾರಿ ಮತ್ತು ಜಿಲ್ಲಾಪಂಚಾಯತ್ ಸಿ.ಇ.ಒ.ರವರೊಂದಿಗೆ ಚಿಂತಾಮಣಿ ತಾಲ್ಲೂಕು ಪಂಚಾಯತಿಗೆ ಭೇಟಿ ಕೊಟ್ಟು

ಸಂಬಂಧಪಟ್ಟ ಮುಖ್ಯಸ್ಥರೊಂದಿಗೆ ಮಾತನಾಡಿ ಧರಣಿ ಮಾಡುವವರಿಗೆ ಸೂಕ್ತ ತಿಳುವಳಿಕೆ ನೀಡಿರುತ್ತಾರೆ. ದಿನಾಂಕ 16-2-2001ರಂದು ನಡೆದ ಘಟನೆ ನಂತರ ಪೆರುಮಾಚನಹಳ್ಳಿ ಗ್ರಾಮದಲ್ಲಿ ಯಾವುದೇ ಅಹಿತಕರ ಘಟನೆ ನಡೆದಿರುವುದು ವರದಿಯಾಗಿರುವುದಿಲ್ಲ. ಸದ್ಯಕ್ಕೆ ಶಾಲೆಯ ಕಟ್ಟಡದ ಕೆಲಸವನ್ನು ನಿಲ್ಲಿಸಲಾಗಿದೆ. ಗಾಯಾಳುಗಳು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ದಾಖಲಾಗಿ, ಪೆರುಮಾಚನಹಳ್ಳಿಯ ಶ್ರೀ ಕೃಷ್ಣಪ್ಪ, ವಯಸ್ಸು 50 ಎಂಬುವವರು ದಿನಾಂಕ 29-3-2001ರಂದು ಮೃತಪಟ್ಟಿರುತ್ತಾರೆ. ಮೃತ ಕೃಷ್ಣಪ್ಪನವರ ದೇಹವನ್ನು ಅದೇ ದಿನ ಶವಸಂಸ್ಕಾರ ಮಾಡಲು ಪೆರುಮಾಚನಹಳ್ಳಿ ಗ್ರಾಮಕ್ಕೆ ತರಲಾಯಿತು. ಮೃತರ ಗುಂಪಿನ ಸುಮಾರು 200 ಜನರು ವಿವಾದಿತ ಶಾಲೆಯ ಕಟ್ಟಡದ ಆವರಣದಲ್ಲಿ ಹೂಳುವುದಾಗಿ ತಕರಾರು ಮಾಡಿದಾಗ ಅವರಿಗೆ ಸಮಾಧಾನ ಹೇಳಿ ಕೊನೆಗೆ ಶವಸಂಸ್ಕಾರವನ್ನು ಗ್ರಾಮದ ಸ್ಮಶಾನದಲ್ಲಿ ಮಾಡಲಾಗುತ್ತಿದೆ. ಸದ್ಯ ಪರಿಸ್ಥಿತಿ ಶಾಂತವಾಗಿರುತ್ತದೆ. ಅಂಜಪ್ಪ ಎಂಬುವವರ ದೂರಿನ ಮೇಲೆ ಚಿಂತಾಮಣಿ ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಲಾದ ಮೊಕದ್ದಮೆಯಲ್ಲಿ 10 ಜನ ಅಪರಾಧಿಗಳನ್ನು ಗುರುತಿಸಲಾಗಿದೆ. ನಾರಾಯಣಸ್ವಾಮಿ ಎಂಬುವವರ ದೂರಿನ ಮೇರೆಗೆ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಲಾದ ಮೊಕದ್ದಮೆಯಲ್ಲಿ 21 ಜನ ಅಪರಾಧಿಗಳನ್ನು ಗುರುತಿಸಲಾಗಿದೆ.

7.40 ಪಿ.ಎಂ

ಮೊಕದ್ದಮೆ ಸಂ:12;2001ರಲ್ಲಿ ಕಲಂ 143,147,148,324,506 ಜೊತೆಗೆ 149 ಐಪಿಸಿ ಪ್ರಕಾರ ಕೊಲೆ ಮೊಕದ್ದಮೆ ಕಲಂನ್ನು ಸೇರಿಸಲಾಗಿದೆ. ಈಗಾಗಲೇ ಪರಿಸ್ಥಿತಿ ಐಪಿಸಿ ಪ್ರಕಾರ ಕೊಲೆ ಮೊಕದ್ದಮೆ ಕಲಂನ್ನು ಸೇರಿಸಲಾಗಿದೆ. ಈಗಾಗಲೇ ಪರಿಸ್ಥಿತಿ ಹತೋಟಿಯಲ್ಲಿದೆ. ನಾವು ಯಾರ ಪರ, ವಿರೋಧ ಮಾಡುವ ಪ್ರಶ್ನೆ ಇಲ್ಲಿ ಉದ್ಭವಿಸುವುಲಿಲ್ಲ. ಯಾರೇ ತಪ್ಪು ಮಾಡಲಿ, ಅವರ ಮೇಲೆ ಕಾನೂನಿನ ಕ್ರಮ ಜರುಗಿಸುತ್ತೇವೆ. ಪ್ರತಿಯೊಂದು ಕಡೆ, ರಾಜಕೀಯ, ಗುಂಪು ಘರ್ಷಣೆ ಆಗುವುದರಿಂದ ಈ ಪರಿಸ್ಥಿತಿ ಉದ್ಭವಿಸುತ್ತದೆ. ಅದು ಚಾಮರಾಜ ನಗರವೇ ಇರಬಹುದು, ಅಲ್ಲಿ ಸರ್ಕಾರದ ಲಾ ಅಂಡ್ ಆರ್ಡರ್ ಪ್ರಶ್ನೆ ಆಗಿರಲಿಲ್ಲ. ಇಲ್ಲಿಯೂ ಕೂಡ ಒಂದು ಶಾಲಾ ಕಟ್ಟಡಕ್ಕಾಗಿ ಈ ಪರಿಸ್ಥಿತಿ ಆಗಿದೆ. ಜಾಗ ಯಾರದ್ದು ಎಂಬ ಬಗ್ಗೆ ಅವರು ಹೇಳಿದ್ದಾರೆ. ಬೇಕಾದರೆ ಅವರು ಆ ಕಾಗದ ಪತ್ರಗಳನ್ನು ಕೊಡಲಿ, ನಾನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಕಳುಹಿಸಿ, ಆ ವಿವರಗಳನ್ನು ತರಿಸುತ್ತೇನೆ. ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳಿಗೂ ಸಹ ಇದರ ಬಗ್ಗೆ ಸಂಪೂರ್ಣ ಮಾಹಿತಿ ಇರಬಹುದು. ಏಕೆಂದರೆ, ನಮ್ಮಲ್ಲಿ ಅಪರಾಧಕ್ಕೆ ಸಂಬಂಧಪಟ್ಟಂತೆ ಮಾಹಿತಿಗಳು ಬಂದಿಲ್ಲ. ಆದರೆ, ಉಳಿದಂತೆ ಟೈಟಲ್ ಬಗ್ಗೆಯಾಗಲಿ ಅಥವಾ ಅವರಿಗೆ ಈ ಕೆಲಸ ಯಾವ ರೀತಿಯಾಗಿ ಅಲಾಟ್‌ಮೆಂಟ್ ಆಯಿತು, ಯಾರು ಮಾಡಬೇಕೆಂದು ಆಯಿತು, ಅದರ ಬಗ್ಗೆ ಸವಿಸ್ತಾರವಾದ ಮಾಹಿತಿ ಅವರಲ್ಲಿರುತ್ತದೆ. ಆದರೆ, ಇಲ್ಲಿ ಸರ್ಕಾರ ಯಾರ ಪರ ಮತ್ತು ವಿರೋಧವಾಗಿ ವರ್ತಿಸುವುದನ್ನು ಯಾವಾಗಲೂ ವಹಿಸಿಕೊಂಡಿಲ್ಲ. ಸರ್ಕಾರ ನಿಷ್ಪಕ್ಷಪಾತವಾಗಿ ತನ್ನ ಪಾತ್ರವನ್ನು ನಿರ್ವಹಿಸಿದೆ. ಅಲ್ಲಿರುವ ಪೊಲೀಸ್ ಅಧಿಕಾರಿ ಎಸ್‌ಪಿಯವರಿರಲಿ, ಯಾರೇ ಇರಲಿ ಅವರನ್ನೆ ತಾನೆ ಅವರಿಗೆ ನಾವು ಪೋಸ್ಟಿಂಗ್ ಕೊಟ್ಟಿದ್ದೇವೆ.

ಒಬ್ಬ ಒಳ್ಳೆಯ ಅಧಿಕಾರಿಯನ್ನು ಅಲ್ಲಿಗೆ ಹಾಕಿದ್ದೇವೆ. ಬಹುಶಃ ಯಾವ ಅನ್ಯಾಯವೂ ಆಗುವುದಿಲ್ಲವೆಂಬುದು ನನ್ನ ಮನವರಿಕೆ. ಮತ್ತೇನಾದರೂ ವ್ಯತ್ಯಾಸಗಳಿದ್ದರೆ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಮೇಲೆ ನಂಬಿಕೆ ಇಲ್ಲವೆಂದರೆ, ಡಿವಿಜನಲ್ ಕಮಿಷನರ್ ರಿಂದ ನಾನು ಆ ಮಾಹಿತಿಗಳನ್ನು ತರಿಸಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ: ಚಾಮರಾಜನಗರ ಮತ್ತು ಇಲ್ಲೂ ಕೂಡ ನಡೆಯುತ್ತದೆಂದು ಹೇಳಿದ್ದಾರೆ. ಆಗಲೇ ನಾವೂ ಕೂಡ ಅವರಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದೇವೆ. ಚಾಮರಾಜನಗರದಲ್ಲಿನ ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ ಕ್ರಮ ತೆಗೆದು ಕೊಂಡಿದ್ದೀರಿ, ಜ್ಯುಡಿಷಿಯಲ್ ಎನ್‌ಕ್ವೈರಿ ಆರ್ಡರ್ ಮಾಡಿರುವುದು ಮಾಡಿದ್ದೀರಿ. ತಾವು ಇಲ್ಲಿ ಏಕೆ ಆ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ? ಉದಾಹರಣೆಗೆ ನಿಮ್ಮ ಪಿಪಿಯಾಗಿರುವವರು ನ್ಯಾಯಾಲಯದ ಮುಂದೆ ಅರ್ಜಿ ಹಾಕುತ್ತಾರೆ, ಅದರಲ್ಲಿ ಅವರು ದಾಖಲು ಮಾಡಿರುವುದೇನೆಂದರೆ, "ಪ್ರಕರಣವು ತನಿಖೆಯ ಹಂತದಲ್ಲಿದ್ದು, ಸ್ಥಳ ಮಹಜರು ಮಾಡಿ, ಕೃತ್ಯಕ್ಕೆ ಉಪಯೋಗಿಸಿದ ಆಯುಧಗಳನ್ನು ಆರೋಪಿಗಳಿಂದ ಅಮಾನತ್ತುಪಡಿಸಿಕೊಳ್ಳಬೇಕಾಗಿರುತ್ತದೆ. ಗಾಯಾಳುಗಳಾದ ಸಾಕ್ಷಿದಾರರ ಹೇಳಿಕೆಗಳನ್ನು ಪಡೆಯಬೇಕಾಗಿರುತ್ತದೆ. ಏಕೆಂದರೆ, ಘಟನೆಯಲ್ಲಿ ಗಾಯಾಳುಗಳು ಈಗಾಗಲೇ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ. ಇನ್ನೊಬ್ಬ ಗಾಯಾಳು ಕೃಷ್ಣಪ್ಪರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕಳುಹಿಸಿದ್ದು, ಆತನು ಮಾತನಾಡುವ ಸ್ಥಿತಿಯಲ್ಲಿ ಇರುವುದಿಲ್ಲ. ಈ ಪ್ರಕರಣದ ಸಾರಾಂಶವನ್ನು ಪರಿಶೀಲಿಸಿದಾಗ, ಆರೋಪಿಗಳು ಕಲಂ 307 ನಡಿಯ ಅಪರಾಧಕ್ಕೆ ಕೃತ್ಯವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಕೂಡ ಠಾಣಾಧಿಕಾರಿಗಳು ಆ ಕಲಂನ್ನು ಅನ್ವಯಿಸಿರುವುದಿಲ್ಲ." ಮಾನ್ಯ ಮಂತ್ರಿಗಳು ಇದುವರೆಗೆ ಏನು ಹೇಳುತ್ತಿದ್ದಾರೆ, ಅದು ವಾಸ್ತವಾಂಶವಲ್ಲ. ಮಧ್ಯದಲ್ಲಿ ಅನೇಕ ಅಂಶಗಳು ಪ್ರವೇಶವಾಗಿವೆ. ಪಿಪಿಯವರು 307 ಕಲಂನ್ನು ಹಾಕಬೇಕಾಗಿತ್ತೆಂದು ಹೇಳುತ್ತಾರೆ. ಯಾವ ಕಾರಣದಿಂದ ಆ ಕಲಂನ್ನು ಇಲ್ಲಿ ಹಾಕಲಿಲ್ಲ? ಇವತ್ತಿನ ದಿವಸ ಅಲ್ಲಿ ಕೆಲವರು ಸತ್ತಿದ್ದಾರೆ. ಈ ಅರ್ಜಿ ಹಾಕಿದ ನಂತರ, ಕೃಷ್ಣಪ್ಪ ಎನ್ನುವವನು ಸತ್ತಿದ್ದಾನೆ. ಅಪರಾಧಿಗಳು ಯಾರು? ನೀವು ಯಾರ್ಯಾರನ್ನು ದಸ್ತಗಿರಿ ಮಾಡಿದ್ದೀರಿ? ದಸ್ತಗಿರಿಯನ್ನು ಮೊದಲೇ ಮಾಡದಿರುವುದಕ್ಕೆ ಕಾರಣವೇನು? ಹಾಕಬೇಕಾದ ಕಲಂ ಹಾಕದೆ ಹೆಸರಿಗೆ ಮಾತ್ರ ಕೇಸ್ ಅನ್ನು ರಿಜಿಸ್ಟರ್ ಮಾಡುವುದಕ್ಕೆ ಬೇರೆ ಕಲಂ ಹಾಕಲು ಕಾರಣವೇನು? ಇದರಲ್ಲಿ ಕಾಣದ ಕೈಗಳ ಕೈವಾಡ ಇದೆ ಎನ್ನುವುದು ವ್ಯಕ್ತವಾಗಬೇಕಲ್ಲವೆ? ಇದಕ್ಕೆಲ್ಲ ಕಾರಣವಾದ ಆ ಸರ್ಕಲ್ ಇನ್ಸ್‌ಪೆಕ್ಟರ್‌ರವರ ಅಮಾನತ್ತಾಗಬೇಕಾಗಿದೆ. ಇದಕ್ಕೆ ಯಾರು ಕಾರಣಕರ್ತರೆಂಬುವ ಹಿನ್ನೆಲೆ ಹೊರಬರಬೇಕಲ್ಲವೆ? ಆ ಹಿನ್ನೆಲೆಯಲ್ಲಿ ಯಾರ್ಯಾರಿದ್ದಾರೆ, ಕಾರಣವೇನೆಂಬುದು ಹೊರ ಬರಬೇಕಾದ ಅವಶ್ಯಕತೆ ಇದೆ. ಆದುದರಿಂದ, ನ್ಯಾಯಾಂಗ ತನಿಖೆ ಆಗಲೇಬೇಕೆಂದು ನಾನು ಹೇಳುತ್ತಿದ್ದೇನೆ. ಇನ್ನೂ ಅನೇಕ ದಾಖಲೆಗಳಿವೆ. ಇವರು ಕೇವಿಯೇಟ್ ಹಾಕಿದ್ದರು. ಅದರಲ್ಲೇ ಈ ಜಾಗ ಯಾರದೆಂಬುದನ್ನು ನಮೂದಿಸಿದ್ದಾರೆ. ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಹಾಕಿರುವ ಕೇವಿಯೇಟ್‌ನಲ್ಲಿ ಇದು ಇಂಥವರ ಜಮೀನೆಂದು ಅವರೇ ಒಪ್ಪಿಕೊಂಡಿರುವ ಪರಿಸ್ಥಿತಿ ಇರುವಾಗ, ಅಲ್ಲಿ ಕುಮ್ಮಕ್ಕಿನಿಂದ ಕಟ್ಟಬೇಕಾಗಿರುವುದು, ಆಯುಧಗಳಿಂದ ತಲೆ ಮೇಲೆ ಹೊಡೆಯುವ ಅವಶ್ಯಕತೆ ಏನಿತ್ತು? ಇದಕ್ಕೆಲ್ಲ ಹಿನ್ನೆಲೆ ಇದೆ. ಆ

ಹಿನ್ನೆಲೆ ಹೊರ ಬರಬೇಕಾದ ಅವಶ್ಯಕತೆ ಇದೆ. ಆ ಅವಶ್ಯಕತೆ ಇರುವುದರಿಂದ, ಇಂದು ಆ ಕೇಸ್ ಅನ್ನು ರಿಜಿಸ್ಟರ್ ಮಾಡಿಕೊಳ್ಳಲು ವಿಫಲನಾಗಿರುವ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಈ ಹಿನ್ನೆಲೆ ಬಗ್ಗೆ ಸತ್ಯಾಂಶ ಹೊರಬರಬೇಕಾಗಿದ್ದರೆ, ನ್ಯಾಯಾಂಗ ತನಿಖೆಯಾಗಬೇಕಾದ ಅವಶ್ಯಕತೆ ಇದೆ. ಅವರು ಕಲಂ 302ರ ಅಡಿಯಲ್ಲಿ ಕೇಸ್ ರಿಜಿಸ್ಟರ್ ಮಾಡಿಕೊಂಡಿದ್ದೇವೆಂದು ಹೇಳುತ್ತಾರೆ. ಅಪರಾಧಿಗಳು ಯಾರು? ಅದನ್ನು ಮಾನ್ಯ ಮಂತ್ರಿಗಳು ಹೇಳಲಿಲ್ಲ. ಹೇಳಬೇಕಾಗುತ್ತದೆ. ಅವರನ್ನು ಇಲ್ಲಿಯವರೆಗೂ ದಸ್ತಗಿರಿ ಮಾಡಿಲ್ಲ. ಅದಕ್ಕೆ ಕಾರಣವೇನು? ಮೊದಲು ಕೇಸನ್ನು ರಿಜಿಸ್ಟರ್ ಮಾಡುವುದಿಲ್ಲ. ಕಲಂ 307 ಅನ್ನು ಅವರ ಮೇಲೆ ಹಾಕುವುದಿಲ್ಲ. ಇಬ್ಬರೂ ಹೋಗಿ ಆಸ್ಪತ್ರೆಗೆ ಸೇರುತ್ತಾರೆ, ಒಬ್ಬ ಸಾಯುತ್ತಾನೆ. ಅಂಥ ಪರಿಸ್ಥಿತಿ ಆಗಿದ್ದರೂ ಸಹ ಅವರು ಏನೂ ಮಾಡುವುದಿಲ್ಲ. ಈಗ ಅವನನ್ನು ದಸ್ತಗಿರಿ ಮಾಡುವುದಕ್ಕೆ ಕೂಡ ತಯಾರಿಲ್ಲ. ಇದಕ್ಕೆಲ್ಲಾ ಕಾರಣವಿದೆ. ಆ ಕಾರಣ ಹೊರಬರಬೇಕಾಗುತ್ತದೆ. ಆದುದರಿಂದ, ನೀವು ಇಂದು ಈ ಕ್ರಮವನ್ನು ಕೈಗೊಳ್ಳಬೇಕು. ದಸ್ತಗಿರಿ ಮಾಡದಿರಲು ಕಾರಣವನ್ನಾದರೂ ಹೇಳಬೇಕಲ್ಲವೆ? ನಾವು ಯಾರಿಗೂ ಹೆದರುವುದಿಲ್ಲ, ಕಾನೂನು ತನ್ನದೇ ಆದ ದಾರಿಯಲ್ಲಿ ನಡೆಯುತ್ತದೆ, ಕಾನೂನೇ ತನ್ನ ಕ್ರಮ ಕೈಗೊಳ್ಳುತ್ತದೆ, ಎಂದು ಹೇಳುವವರು ಇವತ್ತು ಏಕೆ ಅವರನ್ನು ದಸ್ತಗಿರಿ ಮಾಡಲಿಲ್ಲ? ಮೊದಲೇ ಏಕೆ ಸೆಕ್ಷನ್ 307ರಡಿಯಲ್ಲಿ ಕೇಸನ್ನು ರಿಜಿಸ್ಟರ್ ಮಾಡಲಿಲ್ಲ? ಬಾಯಿ ಮಾತಿನಲ್ಲಿ law will take its own course ಎಂದು ಮಂತ್ರ ಜಪ ಮಾಡುವುದರಿಂದ ಆಗುವುದಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಹೇಳಿಕೆ ಕೊಡಬೇಕೆಂದು ನಾನು ಅವರಲ್ಲಿ ಆಗ್ರಹಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಈಗಾಗಲೇ ನನ್ನ ಹತ್ತಿರವಿರುವ ವಿವರಗಳನ್ನು ಕೊಟ್ಟಿದ್ದೇನೆ. ಆ ಪ್ರಾಪರ್ಟಿ ಬಗ್ಗೆ, ಅದರ ಮಾಲೀಕರಾರು ಎನ್ನುವುದನ್ನು ಕೋರ್ಟ್ ಡಿಸೈಡ್ ಮಾಡಲಿ. ಕ್ರಿಮಿನಲ್ ಕೇಸ್‌ಗೆ ಸಂಬಂಧಪಟ್ಟಂತೆ ಅವರು ಕೇಳಿದ್ದಾರೆ. ಸತ್ಯಮೇಲೆ ಕಲಂ 302ರ ಕೆಳಗೆ ಕೇಸ್ ಅನ್ನು ರಿಜಿಸ್ಟರ್ ಮಾಡಿದ್ದಾರೆ. ಎಫ್‌ಐಆರ್ ನಾನು ನನ್ನ ಹತ್ತಿರವಿಲ್ಲ. ಆದರೆ, ಮೊದಲನೇ ಗುಂಪಿನಲ್ಲಿ ಯಾರ್ಯಾರು ಅಪರಾಧಿಗಳು, ಎರಡನೇ ಗುಂಪಿನಲ್ಲಿ ಯಾರ್ಯಾರು ಎನ್ನುವುದನ್ನು, ಓದಿ ಎಂದರೆ ಓದುತ್ತೇನೆ. ಆದರೆ, ಕೋರ್ಟಿನಲ್ಲಿ ಕೇಸಿರುವುದರಿಂದ, ಪ್ರತಿಯೊಂದನ್ನು ಡೀಟೇಲಾಗಿ ಮಾತನಾಡುವುದು ಚೆನ್ನಾಗಿರುವುದಿಲ್ಲ. ಚಾರ್ಜ್‌ಶೀಟ್ ಫೈಲ್‌ನಲ್ಲಿ ಅವರ ಹೆಸರುಗಳು ಬಂದೇ ಬರುತ್ತವೆ. ಮೊದಲನೇ ಪಟ್ಟಿಯಲ್ಲಿ ಸುಮಾರು 10 ಜನರು ಮೊದಲನೇ ಗುಂಪಿನ ಅಪರಾಧಿಗಳಿದ್ದಾರೆ. ಗಾಯಾಳುಗಳ ಸಂಖ್ಯೆ ಕೂಡ ಮೊದಲನೆ ಗುಂಪಿನಲ್ಲಿ ಸುಮಾರು 10 ಜನರು ಎರಡನೇ ಪಟ್ಟಿಯಲ್ಲಿ ಸುಮಾರು 21ಜನರ ಹೆಸರಿದೆ. ಇದರಲ್ಲಿ ಯಾರ ದಾಕ್ಷಿಣ್ಯಕ್ಕೆ ಒಳಗಾಗುವ ಪ್ರಶ್ನೆಯಿಲ್ಲ. ಕಾನೂನಿನ ಪ್ರಕಾರ ಕ್ರಮ ಜರುಗಿಸುತ್ತೇವೆ. ಅಲ್ಲಿಗೂ, ಇಲ್ಲಿಗೂ ವ್ಯತ್ಯಾಸವಿದೆ. ಅಲ್ಲಿ ನೇರವಾಗಿ ಫೈರ್ ಮಾಡಿ ಸರ್ಕಲ್ ಇನ್ಸ್‌ಪೆಕ್ಟರನ್ನೆ ಕೊಂದಿದ್ದಾನೆಂಬ ಆಪಾದನೆ ಇದೆ. ಅದಕ್ಕೆ ಅವನ ಲಿಮಿಟ್ ಎಕ್ಸೀಡ್ ಮಾಡಿದ್ದಾನೋ, ಗುಡ್ ಫೇಥ್‌ನಲ್ಲಿ he has discharged his duties ಎನ್ನುವ ಪ್ರಶ್ನೆ ಇರುವುದರಿಂದ ನಾವು ಜ್ಯುಡಿಷಿಯಲ್ ಪ್ರೋಬ್‌ಗೆ ಒಪ್ಪಿದ್ದೇವೆ. ಇಲ್ಲಿ ಒಂದು ಶಾಲಾ ಕಟ್ಟಡಕ್ಕೆ ಗುಂಪು ಘರ್ಷಣೆಯಾದಲ್ಲಿ ಅದಕ್ಕೆ ನೀವು ಸರ್ಕಲ್ ಇನ್ಸ್‌ಪೆಕ್ಟರ್‌ನ್ನು, ಡಿವೈಎಸ್ಪಿಯನ್ನು ಸಸ್ಪೆಂಡ್‌ನಲ್ಲಿಡಿ ಎನ್ನುವುದು ಸಾಧ್ಯವಿಲ್ಲ. ನಾವು ಪ್ರತಿಯೊಂದು ಕೇಸ್ ಅನ್ನು ನೋಡಿಕೊಂಡು ಪೆಚ್ಚೆಯಿಡಬೇಕಾಗುತ್ತದೆ. ಏಕೆಂದರೆ, ನಾವು ಕೂಡ ಕೆಲಸ ಮಾಡಿದ್ದೀರಿ. ನಿಮಗೂ ಅನುಭವವಿದೆ. ಪ್ರತಿಯೊಂದರಲ್ಲೂ ನಾವು ಈ

ರೀತಿಯಾಗಿ ಕೇಳಿದಲ್ಲೆಲ್ಲಾ ಸಬ್-ಇನ್ಸ್‌ಪೆಕ್ಟರ್ ಸರ್ಕಲ್ ಇನ್ಸ್‌ಪೆಕ್ಟರ್‌ರನ್ನು ಸಸ್ಪೆಂಡ್ ಮಾಡುತ್ತಾ ಹೋದರೆ entire police force will demolish for no reasons. ತಪ್ಪಿದ್ದರೆ ಅಲ್ಲೇನಾದರೂ ಸ್ವಲ್ಪ ಸತ್ಯಾಂಶ ಹೊರಬರುವ ಸಾಧ್ಯತೆ ಇದ್ದಾಗ ನಾವು ಅನೇಕ ಕಡೆ ಒಪ್ಪಿದ್ದೇವೆ, ತಕ್ಷಣ ಮಾಡಿ, ನಾವು ವಿರೋಧ ಪಕ್ಷದ ನಾಯಕರ ಮಾತಿಗೆ ಬೆಲೆ ಕೊಟ್ಟು, ಮಾಡಿದ್ದೇವೆ. ಸ್ಥಳೀಯ ಪರಿಸ್ಥಿತಿ ನೋಡಿ ನಾವು ಅನೇಕ ಸಾರಿ ನಾವಾಗಿಯೇ ಕ್ರಮವನ್ನು ಜರುಗಿಸಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾವಾಗಿ ನ್ಯಾಯಾಂಗ ತನಿಖೆ ಘೋಷಿಸಿದ್ದೇವೆ, ನಾವು ಹಿಂದುಮುಂದು ಜರಿಯುವವರಲ್ಲ ಈ ಕೇಸ್‌ನಲ್ಲಿ ನ್ಯಾಯಾಂಗ ತನಿಖೆ ಮಾಡಿಸುವ ಅವಶ್ಯಕತೆ ಇಲ್ಲ ಕಾನೂನಿನ ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ: ನಿಮ್ಮ ಪಬ್ಲಿಕ್ ಪ್ರಾಸಿಕ್ಯೂಟರ್ ರವರು ನ್ಯಾಯಾಲಯದ ಮುಂದೆ ಹಾಕಿರುವ ಪತ್ರವನ್ನು ನಾನು ಒದಿದ್ದೇನೆ, ಸೆಕ್ಷನ್ 307ರಲ್ಲಿ ಕೇಸ್ ರಿಜಿಸ್ಟರ್ ಆಗಬೇಕಾಗಿದ್ದು ಇದನ್ನು ಮಾಡಿಲ್ಲವೆಂದು ಅವರೇ ಹೇಳುತ್ತಿದ್ದಾರೆ, ಇದಕ್ಕೇನು ಕಾರಣ? ಇದು ಕರ್ತವ್ಯ ಲೋಪ ಅಲ್ಲವೆ? ನಾನು ಓದಿದ್ದು ನ್ಯಾಯಾಲಯದ ದಾಖಲೆಯಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸೇರಿಸಲಾಗಿದೆ ಎಂದು ನಾನು ಈಗ ಹೇಳಲಿಲ್ಲವೆ? ಹಾಗಾದರೆ, ಸಾಯುವುದಕ್ಕೆ ಮುಂಚೆನೇ ಸೇರಿಸುವುದಕ್ಕಾಗುತ್ತದೆಯೇ?

ಶ್ರೀ ಸಿ. ಬೈರೇಗೌಡ: ಆಗ ಸೆಕ್ಷನ್ 307ನ್ನು ಹಾಕಬೇಕಾಗಿತ್ತು. ನಾನು ಈಗಾಗಲೇ ಇದನ್ನು ಓದಿದ್ದು ಸಮಯದ ಅಭಾವವಿರುವುದರಿಂದ ಪುನಃ ನಾನು ಇದನ್ನು ಓದಲಿಕ್ಕೆ ಇಷ್ಟಪಡುವುದಿಲ್ಲ. ಇವತ್ತಿನವರೆವಿಗೂ ನೀವು ಆಪರಾಧಿಗಳನ್ನು ದಸ್ತಗಿರಿ ಮಾಡಿಲ್ಲ, ಯಾವ ಕಾರಣಕ್ಕಾಗಿ ಮಾಡಿಲ್ಲ? Law will take its own course ಎಂದು ಹೇಳುತ್ತೀರಾ, ಹಾಗಾದರೆ ಏಕೆ ಅವರನ್ನು ದಸ್ತಗಿರಿ ಮಾಡಲಿಲ್ಲ? ಅವರನ್ನು ಹಿಡಿದು ಬಿಟ್ಟಿದ್ದಾರೆ ಅವರು ಎದುರುಗಡೆನೇ ಇದ್ದಾರೆ, ಇದಕ್ಕಾಗಿಯೇ ಈ ಪೊಲೀಸ್ ಮತ್ತು ಈ ವ್ಯವಸ್ಥೆ ಇರುವುದು? ಇವರು ಹೇಳುವ ಮಾತಿಗೂ ಮತ್ತು ಕೃತಿಗೂ ಎಷ್ಟು ವ್ಯತ್ಯಾಸವಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಿಡಿದು ಬಿಟ್ಟಿದ್ದಾರೆಂದು ಅವರು ಹೇಳುತ್ತಿದ್ದಾರೆ, ಅವರನ್ನು ಯಾವ ಕಾರಣಕ್ಕೆ ಬಿಟ್ಟಿದ್ದಾರೋ, ಅವರೇ ಇದ್ದಾರೋ, ಎನ್ನುವ ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ: ಆಪರಾಧಿಗಳು ಯಾರು ಇದ್ದಾರೆ ಅಂಥವರನ್ನೇ ಹಿಡಿದು ಬಿಟ್ಟಿರುವುದು, ಇದಕ್ಕೇನು ಕಾರಣ? ನಿಮ್ಮ ಕಾನೂನಿನಲ್ಲಿ ಇದಕ್ಕೆ ಅವಕಾಶ ಇದೆಯೇ? ನೀವೇ? ಐ.ಪಿ.ಸಿ. ಕಲಂ 302 ಪ್ರಕಾರ ಕೇಸ್ ರಿಜಿಸ್ಟರ್ ಆಗಿದೆ ಎಂದು ಹೇಳುತ್ತೀರಿ, ಹೀಗಿರುವಾಗ ಆಪರಾಧಿಯನ್ನು ಹಿಡಿದು ಬಿಡಬೇಕು ಎನ್ನುವುದು ಯಾವ ಕಾನೂನಿನಲ್ಲಿದೆ? ಇದು ದೇಶದ ಕಾನೂನೋ ನಿಮ್ಮ ಕಾನೂನೋ? ದೇಶದ ಕಾನೂನಿನಲ್ಲಿ ಆಪರಾಧಿಯನ್ನು ದಸ್ತಗಿರಿ ಮಾಡಬೇಕೆಂದಿಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಿಡಿದು ಬಿಟ್ಟಿದ್ದಾರೆಂದು ನೀವು ಹೇಳುತ್ತಿದ್ದೀರಿ, ನಾನೀಗಾಗಲೇ ಹೇಳಿರುವಂತೆ ಹಿಡಿದು ಬಿಟ್ಟಿದ್ದರೆ ಯಾರು ಎನ್ನುವ ಮಾಹಿತಿಯನ್ನು ತರಿಸಿ ಕೊಳ್ಳುತ್ತೇನೆಂದು ಹೇಳಿದೆ. ಹಿಡಿದಾದ ಮೇಲೆ ನಾವು ಇದುವರೆವಿಗೂ ಯಾರನ್ನು ಬಿಟ್ಟಿಲ್ಲ. ಹಿಂದಿನ 10 ವರ್ಷಗಳ ಕೇಸ್ ಎಲ್ಲಾ ಈಗ ಹೊರಗೆ ಬರುತ್ತಿವೆ. ಬೇಕಾದರೆ ನೀವು ನೋಡಿ.

ಶ್ರೀ ಸಿ. ಭೈರೇಗೌಡ: 10 ವರ್ಷದ್ದೋ ನಲವತ್ತು ವರ್ಷದ್ದೋ ಆ ಪ್ರಶ್ನೆ ಬೇರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮ್ಮ ಕಾಲದಲ್ಲಿ ಯಾರಾದರೂ ದಾಕ್ಷಿಣ್ಯಕ್ಕೆ ಒಳಗಾಗಿರಬಹುದು, ಈ ಸರ್ಕಾರ ದಾಕ್ಷಿಣ್ಯಕ್ಕೆ ಒಳಗಾಗುವುದಿಲ್ಲ, ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಯಾರೇ ತಪ್ಪು ಮಾಡಿದರೂ ಕೂಡ ಅವರು ನಿಮ್ಮ ಪರವಾಗಿ ಇರಬಹುದು ನಮ್ಮ ಪರವಾಗಿ ಇರಬಹುದು ಅವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ನೀವು ಸುಮ್ಮನೆ ಆಪಾದನೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಸಿ. ಭೈರೇಗೌಡ: ಯಾರ ಪರವಾಗಿ ಇರತಕ್ಕಂಥವರಾದರೂ ಅವರ ಮೇಲೆ ಕಾನೂನು ಚಲಾವಣೆ ಆಗಲೇಬೇಕೆಂದು ನಾನು ಹೇಳುತ್ತಿರುವುದು. ಇದು ಆಗಿಲ್ಲ ಎನ್ನುವುದಕ್ಕೆ ನನ್ನ ಹತ್ತಿರ ದಾಖಲೆ ಇದೆ. ಲೋಪವಾಗಿರುವುದರಿಂದಲೇ ಅವರನ್ನು ಸಸ್‌ಪೆಂಡ್ ಮಾಡಿ ಎಂದು ಕೇಳುತ್ತಿರುವುದು.

SRI MALLIKARJUNA KHARGE: Let me see the report. I cannot take action on the oral information.

ಅಧ್ಯಕ್ಷರು: ರೆಕಾರ್ಡ್ ನೋಡಿ ಮಾಡುತ್ತೇವೆಂದು ಹೇಳುತ್ತಿದ್ದಾರಲ್ಲಾ ಬಿಡಿ.

ಶ್ರೀ ಸಿ. ಭೈರೇಗೌಡ: ಇಷ್ಟರಲ್ಲಿ ಆ ರೆಕಾರ್ಡ್ಸ್ ತರಿಸಲಿಕ್ಕೆ ಆಗುವುದಿಲ್ಲವೆ?...ನನಗೇನು ಗೊತ್ತಿದೆಯೋ ಅದನ್ನೇ ನಾನು ಹೇಳುತ್ತಿರುವುದು,..

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆಯಿತು ತರಿಸಿಕೊಂಡು ನೋಡುತ್ತೇನೆ.

12. ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ

ಶ್ರೀ ಸಿ. ಭೈರೇಗೌಡ(ವೇಮಗಲ್): ಅವರು ಅದೇನು ಕ್ರಮ ತೆಗೆದುಕೊಳ್ಳುತಾರೋ ನೋಡೋಣ ಈಗ ಮತ್ತೊಂದು ವಿಷಯ ಏನೆಂದರೆ, ಸಮಯದ ಅಭಾವವಿರುವುದರಿಂದ ನಾನು ವಿವರಕ್ಕೆ ಹೋಗುವುದಿಲ್ಲ. ಮಂಡ್ಯದಲ್ಲಿರುವ ಮೈಷುಗರ್ ಕಾರ್ಖಾನೆಯಲ್ಲಿ ತನ್ನದೇ ಆದ ಡಿಸ್ಟಿಲರಿ ಹಾಗೂ 12 ಸಾರಾಯಿ ಘಟಕಗಳನ್ನು ಹೊಂದಿದೆ. ಸಾರಾಯಿ ತಯಾರಿಸಿ ಹಂಚಿಕೆ ಮಾಡುವುದನ್ನು ಕೆಲವು ಜಿಲ್ಲೆಗಳಾದ ಮೈಸೂರು, ಮಂಡ್ಯ, ಮಂಗಳೂರು, ಹಾಸನ, ಶಿವಮೊಗ್ಗ, ಕುಶಾಲನಗರ, ಚಿಕ್ಕಮಗಳೂರು, ಹಿರಿಯೂರು, ತುಮಕೂರು, ಕೋಲಾರ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಈ ಜಿಲ್ಲೆಗಳಿಗೆ ಮೈಸೂರು ಸಕ್ಕರೆ ಕಾರ್ಖಾನೆಗೆ ಸಾರಾಯಿಯನ್ನು ಸ್ಯಾಚೆಟ್ ಮಾಡಿ ಹಂಚತಕ್ಕಂಥ ಕೆಲಸ ಕೊಟ್ಟಿರುತ್ತಾರೆ. 1998:ರಲ್ಲಿ 78,531ಲೀಟರ್ ಸಾರಾಯಿ ನಾಪತ್ತೆ ಆಗುತ್ತದೆ, ಪ್ರತಿನಿತ್ಯ ಇಲ್ಲಿ ಇಂಥ ದುರ್ವ್ಯವಹಾರ ಎಷ್ಟಾಗುತ್ತಿದೆ, ಇದಕ್ಕೆ ಎಷ್ಟು ಬೆಲೆ ಆಗುತ್ತದೆ, ಎನ್ನುವ ಎಲ್ಲಾ ವಿವರ ನನ್ನ ಹತ್ತಿರ ಇದೆ.